25 Jun 2023

# ದೀಪಾ ಮಲ್ಲಿಕ್ ಹೆಣ್ಣು ಮಕ್ಕಳಿಗೆ ಸ್ಫೂರ್ತಿ



ಹುಬ್ಬಳ್ಳಿ: ದೇಹದ ಅಂಗಾಂಗಗಳು ನಿಷ್ಕ್ರಿಯವಾಗಿದ್ದರೂ ಸಾಧನೆಗೆ ಅಡ್ಡಿಯಾಗದಂತೆ ನೋಡಿಕೊಂಡು ಪ್ಯಾರಾ ಒಲಂಪಿಕ್‌ನ ಅಥ್ಲೆಟಿಕ್ಸ್‌ನಲ್ಲಿ (ಗುಂಡು ಎಸೆತ) ವಿಭಾಗದಲ್ಲಿ ದೇಶಕ್ಕೆ ಮೊದಲ ಪದಕ ತಂದುಕೊಟ್ಟ ಕೀರ್ತಿ ದೀಪಾ ಮಲ್ಲಿಕ ಅವರಿಗೆ ಸಲ್ಲುತ್ತದೆ. ಹೀಗಾಗಿ ದೀಪಾ ಮಲ್ಲಿಕ್ ನಾಡಿನ ಪ್ರತಿಯೊಬ್ಬ ಹೆಣ್ಣುಮಕ್ಕಳಿಗೆ ಸ್ಫೂರ್ತಿ ಹಾಗೂ ಪ್ರೇರಣೆ ಎಂದು ಸಭಾಪತಿ ಬಸವರಾಜ್ ಹೊರಟ್ಟಿ ಅಭಿಪ್ರಾಯಪಟ್ಟರು.

ಇತ್ತೀಚೆಗೆ ಮುಂಬೈನಲ್ಲಿ ನಡೆದ ಪ್ರಪ್ರಥಮ ರಾಷ್ಟ್ರೀಯ ಶಾಸಕರ ಸಮ್ಮೇಳನದಲ್ಲಿ ತಮ್ಮ ಅಧ್ಯಕ್ಷತೆಯಲ್ಲಿ ನಡೆದ ಚರ್ಚಾಗೋಷ್ಠಿಯಲ್ಲಿ ವಿಶೇಷ ಅತಿಥಿಯಾಗಿ ಭಾಗವಹಿಸಿದ್ದ ದೀಪಾ ಮಲ್ಲಿಕ್ ಅವರನ್ನು ಸಭೆಗೆ ಪರಿಚಯ ಮಾಡಿ ಸನ್ಮಾನಿಸಿ ಮಾತನಾಡಿದರು.

30ನೇ ವಯಸ್ಸಿನಲ್ಲಿ ಕ್ರೀಡೆಯಲ್ಲಿ ಸಾಧನೆ ಮಾಡುತ್ತಾ ಹಂತಹಂತವಾಗಿ ಮೇಲೆ ಬಂದ ಇವರು ಅಂತಾರಾಷ್ಟ್ರೀಯ ಮಟ್ಟದ ಏಷ್ಯನ್ ಚಾಂಪಿಯನ್, ವರ್ಲ್ಡ್ ಚಾಂಪಿಯನ್, ಐಪಿಸಿ ಚಾಂಪಿಯನ್ ಹೀಗೆ ಹಲವಾರು ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾಕೂಟದಲ್ಲಿ ಗುಂಡು ಎಸೆತ, ಜಾವಲಿನ್ ಎಸೆತ, ಸ್ವಿಮಿಂಗ್, ಮೋಟಾರ್ ಸೈಕ್ಲಿಂಗ್ ವಿಭಾಗದಲ್ಲಿ ಭಾಗವಹಿಸಿ ಬಂಗಾರ ಪದಕ ಬೆಳ್ಳಿ ಪದಕ ಪಡೆದರು. ಇವರ ಕ್ರೀಡಾ ಜೀವನ ಆರಂಭವಾಗಿದ್ದು ಕರ್ನಾಟಕದಿಂದ ಎಂದು ಹೇಳಲು ಹೆಮ್ಮೆ ಅನಿಸುತ್ತದೆ ಎಂದು ಹೇಳಿದರು.

ಐಎಎಸ್ ಅಧಿಕಾರಿ ರಾಧಿಕಾ ರಸ್ತೋಗಿ ಇವರು ಸಹ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ವಿಧಾನ ಪರಿಷತ್ ಸದಸ್ಯ ಹನುಮಂತ ನಿರಾಣಿ, ಕಾರ್ಯದರ್ಶಿ ಕೆ.ಆರ್.ಮಹಾಲಕ್ಷ್ಮೀ ಸೇರಿದಂತೆ ನಾಡಿನ ವಿವಿಧ ವಿಧಾನ ಸಭೆ ಹಾಗೂ ವಿಧಾನ ಪರಿಷತ್‌ನ ಸದಸ್ಯರು ಉಪಸ್ಥಿತರಿದ್ದರು.

# ಪ್ಯಾರಾ ಒಲಂಪಿಕ್‌ನಲ್ಲಿ ದೇಶಕ್ಕೆ ಮೊದಲ ಪದಕ ತಂದುಕೊಟ್ಟ ದೀಪಾ ಮಲ್ಲಿಕಳ ಸಾಧನೆ ಶ್ಲಾಘನೀಯ : ಬಸವರಾಜ ಹೊರಟ್ಟಿ

ಗದಗ, 24. ದೇಹದ ಅಂಗಾಂಗಗಳು ನಿಷ್ಕ್ರಿಯವಾಗಿದ್ದರು ಸಾಧನೆಗೆ ಅಡ್ಡಿಯಾಗದಂತೆ ನೋಡಿ-ಕೊಂಡು ಪ್ಯಾರಾ ಒಲಂಪಿಕ್‌ನ ಅಥ್ಲೆಟಿಕ್ಸ್‌ನಲ್ಲಿ (ಗುಂಡು ಎಸೆತ) ವಿಭಾಗದಲ್ಲಿ ದೇಶಕ್ಕೆ ಮೊದಲ ಪದಕ ತಂದುಕೊಟ್ಟ ಕೀರ್ತಿ ದೀಪಾ ಮಲ್ಲಿಕ ಅವರಿಗೆ ಸಲ್ಲುತ್ತದೆ. ಹೀಗಾಗಿ ದೀಪಾ ಮಲ್ಲಿಕ್ ನಾಡಿನ ಪ್ರತಿಯೊಬ್ಬ ಹೆಣ್ಣು ಮಕ್ಕಳಿಗೆ ಸ್ಫೂರ್ತಿ ಹಾಗೂ ಪ್ರೇರಣೆ ಎಂದು ಸಭಾಪತಿ ಬಸವರಾಜ್ ಹೊರಟ್ಟಿ ಅವರು ಅಭಿಪ್ರಾಯಪಟ್ಟರು.



ಅವರು ಕಳೆದ ವಾರ ಮುಂಬೈನಲ್ಲಿ ನಡೆದ ಪ್ರಪ್ರಥಮ ರಾಷ್ಟ್ರೀಯ ಶಾಸಕರ ಸಮ್ಮೇಳನದಲ್ಲಿ ತಮ್ಮ ಅಧ್ಯಕ್ಷತೆಯಲ್ಲಿ (WORK LIFE BALANCE A KEY TO SUCCESS) ಎಂಬ ವಿಷಯದ ಮೇಲೆ ನಡೆದ ಚರ್ಚಾಗೋಷ್ಠಿಯಲ್ಲಿ ವಿಶೇಷ ಅತಿಥಿಯಾಗಿ ಭಾಗವಹಿಸಿದ್ದ ದೀಪಾ ಮಲ್ಲಿಕ್ ಅವರನ್ನು ಸಭೆಗೆ ಪರಿಚಯ ಮಾಡಿ ಸನ್ಮಾನಿಸಿ ಮಾತನಾಡಿದ ಸಭಾಪತಿ ಬಸವರಾಜ್ ಹೊರಟ್ಟಿ ಅವರು ದೀಪಾ ಮಲ್ಲಿಕ್ ಅವರ ಸಾಧನೆ ಹಾಗೂ ಅನುಭವಗಳನ್ನು ಆಲಿಸುವುದೇ ಒಂದು ಖುಷಿ ಹೀಗಾಗಿ ದೀಪಾ ಮಲ್ಲಿಕ್ ನಾಡಿನ ಹೆಮ್ಮೆಯ ಪುತ್ರಿ.

1970 ಸೆಪ್ಟೆಂಬರ್ 30 ರಂದು ಹರಿಯಾಣದ ಬೈನಸ್ ವಾಲದಲ್ಲಿ ಜನಿಸಿದ ಇವರು ತಮ್ಮ 5 ವರ್ಷದವರಿದ್ದಾಗ ಖಠಿಟಿಚಿಟ ಣಣಾಟಚಿಡಿ (ಸ್ಪೈನಲ್ ಟ್ಯೂಮರ್) ಸಮಸ್ಯೆಯಿಂದ ಬಳಲುತ್ತಿದ್ದರು. ಸ್ವಲ್ಪ ಅವಧಿ ಗುಣಮುಖವಾದರೂ 1999ರಲ್ಲಿ ಈ ಸಮಸ್ಯೆ ಮರುಕಳಿಸಿ ಗಂಡ ಹಾಗೂ ತಂದೆಯವರು ಕಾರ್ಗಿಲ್ ಯುದ್ಧವನ್ನು ಎದುರಿಸುತ್ತಿದ್ದ ಸಂದರ್ಭದಲ್ಲಿ ಇವರೊಬ್ಬರೇ ಶಸ್ತ್ರಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾಗುವ ಸನ್ನಿವೇಶ ಒದಗಿಬಂದು ಜೀವನ್ಮರಣ ಪರಿಸ್ಥಿತಿಯಲ್ಲಿ ಸ್ಪೈನಲ್ ಟ್ಯೂಮರ್ ಚಿಕಿತ್ಸೆಯಿಂದಾಗಿ 183 ಸ್ಟಿಚಿಸ್‌ಗಳೊಂದಿಗೆ ಶೋಲ್ಡರ್ ಬ್ಲ್ಯಾಡ್ಸ್ ಅಳವಡಿಸಿದ ಪರಿಣಾಮ ಇವರು ಬದುಕುಳಿದರು. ಎದೆಯ ಕೆಳಭಾಗದ ದೇಹದ ಅಂಗಗಳು ನಿಷ್ಕ್ರಿಯವಾದರೂ ಇವರ ಉತ್ಸಾಹದಲ್ಲಿ ಕೊರತೆಯಾಗಲಿಲ್ಲ. ಬದಲಿಗೆ ಜೀವನ ನಿರ್ವಹಣೆಯಲ್ಲಿ ಕೆಲವು ಬದಲಾವಣೆ ಮಾರ್ಪಾಡು ಮಾಡಿಕೊಂಡು ಮೊದಲು ಹೋಟೆಲ್ ಉದ್ಯಮವನ್ನು ಪ್ರಾರಂಭಿಸಿದ ಇವರು ನಂತರದ ದಿನಗಳಲ್ಲಿ 2009ರ ಸುಮಾರಿಗೆ ಪ್ಯಾರಾ ಅಥ್ಲೆಟಿಕ್ಸ್ ಕಡೆಗೆ ಗಮನಹರಿಸಿದರು. ಇವರು ತಮ್ಮ ದೇಹದ ಅಂಗ ನಿಷ್ಕ್ರೀಯತೆ ಇವರ ಸಾಧನೆಯಲ್ಲಿ ಕುಟುಂಬದ ನಿರ್ವಹಣೆಯಲ್ಲಿ ವಯಕ್ತಿಕ ಜೀನವದಲ್ಲಾಗಲಿ ಅಥವಾ ಸಾರ್ವಜನಿಕ ಜೀವನದಲ್ಲಾಗಲಿ ಪರಿಣಾಮ ಬೀರಲು ಬಿಡಲಿಲ್ಲ.

(ಕೊನೆಯ ಪುಟಕ್ಕೆ)....

# ದೀಪಾ ಮಲ್ಲಿಕ್‌ರ ಸಾಧನೆ ಶ್ಲಾಘನೀಯ: ಬಸವರಾಜ್ ಹೊರಟ್ಟಿ

■ ವಿಜಯಸಾಕ್ಷಿ ಸುದ್ದಿ, ಮುಂಬೈ

ದೇಹದ ಅಂಗಾಂಗಗಳು ನಿಷ್ಕ್ರಿಯವಾಗಿದ್ದರೂ, ಸಾಧನೆಗೆ ಅಡ್ಡಿಯಾಗದಂತೆ ನೋಡಿಕೊಂಡು ಪ್ಯಾರಾ ಒಲಂಪಿಕ್‌ನ ಅಥ್ಲೆಟಿಕ್ಸ್‌ನಲ್ಲಿ (ಗುಂಡು ಎಸೆತ) ದೇಶಕ್ಕೆ ಮೊದಲ ಪದಕ ತಂದುಕೊಟ್ಟ ಕೀರ್ತಿ ದೀಪಾ ಮಲ್ಲಿಕ್ ಅವರಿಗೆ ಸಲ್ಲುತ್ತದೆ. ದೀಪಾ ಮಲ್ಲಿಕ್ ನಾಡಿನ ಹೆಣ್ಣು ಮಕ್ಕಳಿಗೆ ಸ್ಫೂರ್ತಿ ಹಾಗೂ ಪ್ರೇರಣೆ ಎಂದು ಸಭಾಪತಿ ಬಸವರಾಜ್ ಹೊರಟ್ಟಿ ಅವರು ಅಭಿಪ್ರಾಯಪಟ್ಟರು.

ಅವರು ಇತ್ತೀಚೆಗೆ ಮುಂಬೈನಲ್ಲಿ ಜರುಗಿದ ಪ್ರಪ್ರಥಮ ರಾಷ್ಟ್ರೀಯ ಶಾಸಕರ ಸಮ್ಮೇಳನದಲ್ಲಿ ನಡೆದ ಚರ್ಚಾಗೋಷ್ಠಿಯಲ್ಲಿ ವಿಶೇಷ ಅತಿಥಿಯಾಗಿ ಭಾಗವಹಿಸಿದ್ದ ದೀಪಾ ಮಲ್ಲಿಕ್ ಅವರನ್ನು ಸಭೆಗೆ ಪರಿಚಯಿಸಿ, ಸನ್ಮಾನಿಸಿ ಮಾತನಾಡಿದರು.

ದೀಪಾ 5 ವರ್ಷದವರಿದ್ದಾಗಲೇ ಸ್ಪೈನಲ್ ಟ್ಯೂಮರ್ ಸಮಸ್ಯೆಯಿಂದ ಬಳಲುತ್ತಿದ್ದರು. ಇವರ ಕ್ರೀಡಾಸಾಧನೆಯ



ಮೈಲುಗಲ್ಲುಗಳನ್ನು ಅವಲೋಕಿಸುವುದೇ ಒಂದು ಹೆಮ್ಮೆ. ತಮ್ಮ 30ನೇ ವಯಸಿನಲ್ಲಿ ಕ್ರೀಡೆಯಲ್ಲಿ ಸಾಧನೆ ಮಾಡುತ್ತಾ ಹಂತಹಂತವಾಗಿ ಮೇಲೆ ಬಂದ ಇವರು ಅಂತಾರಾಷ್ಟ್ರೀಯ ಮಟ್ಟದ ಹಲವಾರು ಕ್ರೀಡಾಕೂಟಗಳಲ್ಲಿ ಭಾಗವಹಿಸಿ ಪದಕಗಳನ್ನು ಪಡೆದರು. ಇಂಥ ಸಾಧಕರನ್ನು ಗೌರವಿಸುವುದು ಹೆಮ್ಮೆಯ ಸಂಗತಿ ಎಂದರು.

ಗೌರವ ಸ್ವೀಕರಿಸಿ ಮಾತನಾಡಿದ ದೀಪಾ ಮಲ್ಲಿಕ್, ದೇಶದಲ್ಲಿಯೇ ಅತ್ಯಂತ ಹಿರಿಯ ಹಾಗೂ ಐತಿಹಾಸಿಕ ದಾಖಲೆಮಾಡಿದ ಸಭಾಪತಿ ಬಸವರಾಜ ಹೊರಟ್ಟಿಯವರ ಅಧ್ಯಕ್ಷತೆಯಲ್ಲಿ ನಡೆದ ಈ ಚಿಂತನ-ಮಂಥನ ಸಭೆಯಲ್ಲಿ ಭಾಗವಹಿಸಿದ್ದು ಹೆಮ್ಮೆಯ ಹಾಗೂ ಆನಂದದ ಸಂಗತಿಯಾಗಿದೆ. ನನ್ನೆಲ್ಲ ಶ್ರೇಯಸ್ಸು ನನ್ನ ತಂದೆ-ತಾಯಿಗೆ ಸಲ್ಲುತ್ತದೆ ಎಂದರು.

ಪದ್ಮಶ್ರೀ ಪುರಸ್ಕೃತ ಗಾಯಕ ಪ್ರಹ್ಲಾದಸಿಂಗ್ ತಿಪಣ್ಯಾ, ಕಬೀರ ಭಜನ. ಐಎಎಸ್ ಅಧಿಕಾರಿ ರಾಧಿಕಾ ರಸ್ತೋಗಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ವಿ.ಪ ಸದಸ್ಯ ಹನಮಂತ ನಿರಾಣಿ, ಕಾರ್ಯದರ್ಶಿ ಕೆ ಆರ್ ಮಹಾಲಕ್ಷ್ಮೀ ಸೇರಿದಂತೆ ವಿವಿಧ ವಿಧಾನಸಭೆ ಹಾಗೂ ವಿಧಾನಪರಿಷತ್ ಸದಸ್ಯರು ಉಪಸ್ಥಿತರಿದ್ದರು.